ಆ) ಅತಿಯಾದ ಮಳೆಯಿಂದಾಗಿ ಈ ವಲಯಗಳ 47 ಕೆರೆಗಳು ಒಡೆದುಹೋಗಿವೆ. ಈ ಕೆರೆಗಳ ದುರಸ್ತಿಗಾಗಿ ರೂ.581.75 ಲಕ್ಷಗಳ ಅಂದಾಜು ಮಾಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಈ ವಲಯಗಳ 120 ಕೆರೆಗಳಲ್ಲಿನ ಭಾಗಶಃ ಹೂಳನ್ನು ತೆಗೆಯಲಾಗಿದ್ದು, ಈ ಎಲ್ಲಾ ಕೆರೆಗಳಲ್ಲಿ ರೈತರ ಸಹಭಾಗಿತ್ವದಲ್ಲಿ ಹೂಳನ್ನು ತೆಗೆಯಲಾಗಿದೆ.

ಈ) ಆಯವ್ಯಯದಲ್ಲಿ ರೈತರ ಸಹಭಾಗಿತ್ವದಲ್ಲಿ ಹೂಳೆತ್ತುವ ಕಾರ್ಯಕ್ರಮಕ್ಕೆ ನೀಡುವ ಅನುದಾನಕ್ಕೆ ಅನುಗುಣವಾಗಿ ವರ್ಷಾವಾರು ಕಾಮಗಾರಿಗಳನ್ನು ಗುರುತಿಸಿ ಕೈಗೊಳ್ಳಲಾಗುವುದು.

ಇದಲ್ಲದೆ ರಾಜ್ಯದ 5000 ಕೆರೆಗಳಲ್ಲಿ (ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಕೆರೆಗಳು ಸೇರಿದಂತೆ) ಹೂಳೆತ್ತುವ ಅಂಶ ಒಳಗೊಂಡಂತೆ ಸಮಗ್ರ ಅಭಿವೃದ್ಧಿಗಾಗಿ ವಿಶ್ವಬ್ಯಾಂಕ್ ನೆರವು ಕೋರಿದ್ದು, ಈ ಪ್ರಸ್ತಾವನೆಗೆ ವಿಶ್ವಬ್ಯಾಂಕ್‌ನಿಂದ ಅನುಮೋದನೆ ಬಂದ ನಂತರ 5 ವರ್ಷಗಳಲ್ಲಿ ಈ ಕೆರೆಗಳ ಸಮಗ್ರ ಅಭಿವೃದ್ಧಿ ಕೈಗೊಳ್ಳಲಾಗುವುದು.

ಗ್ರಾಹಕರ ವೇದಿಕೆಗಳು

4445 - ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಗ್ರಾಹಕರ ವೇದಿಕೆಗಳ ಸಂಖ್ಯೆ ಎಷ್ಟು? ಈ ವೇದಿಕೆಗಳಲ್ಲಿ ಬಾಕಿಯಿರುವ ಪ್ರಕರಣಗಳ ಸಂಖ್ಯೆ ಎಷ್ಟು?*

ಆ) *ಈ ಗ್ರಾಹಕರ ವೇದಿಕೆಗಳಲ್ಲಿ ಖಾಲಿ ಇರುವ ನ್ಯಾಯಾಧೀಶರ ಸಂಖ್ಯೆ ಎಷ್ಟು? ಖಾಲಿ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು?*

ಇ) *ಖಾಲಿಯಿರುವ ನ್ಯಾಯಾಧೀಶರ ಹಾಗೂ ಸಿಬ್ಬಂದಿಗಳ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು?*

ಈ) *ಬಾಕಿ ಇರುವ ಪ್ರಕರಣಗಳ ತ್ವರಿತ ವಿಲೇವಾರಿಗೆ ಅಗತ್ಯವಿರುವೆಡೆ ಈಗ ಇರುವ ಗ್ರಾಹಕರ ವೇದಿಕೆಗಳಲ್ಲದೆ ಹೊಸದಾಗಿ ಗ್ರಾಹಕರ ವೇದಿಕೆಗಳನ್ನು ಮಂಜೂರು ಮಾಡುವ ವಿಷಯವನ್ನು ಸರ್ಕಾರ ಪರಿಶೀಲಿಸುವುದೇ?*

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ 1 ರಾಜ್ಯ ಆಯೋಗವು 20 ಜಿಲ್ಲಾ ಗ್ರಾಹಕರ ವೇದಿಕೆಗಳು ಮತ್ತು 2 ಹೆಚ್ಚುವರಿ ಗ್ರಾಹಕರ ವೇದಿಕೆಗಳು ಇರುತ್ತವೆ.

ದಿನಾಂಕ 30.9.2000ರೊಂದಿಗೆ ಕರ್ನಾಟಕ ರಾಜ್ಯ ಆಯೋಗದಲ್ಲಿ 629 ಫಿರ್ಯಾದುಗಳು ಮತ್ತು 2000 ಮೇಲ್ಮನವಿಗಳು ಬಾಕಿ ಇದ್ದವು. ರಾಜ್ಯದಲ್ಲಿರುವ ಎಲ್ಲಾ ಜಿಲ್ಲಾ ವೇದಿಕೆಗಳಲ್ಲಿ ಒಟ್ಟು 6399 ಫಿರ್ಯಾದುಗಳು ಬಾಕಿ ಇದ್ದವು.

ಆ) ಒಂದು ನ್ಯಾಯಾಧೀಶರ ಹುದ್ದೆ ಖಾಲಿ ಇದೆ. ಖಾಲಿ ಇರುವ ಸಿಬ್ಬಂದಿಗಳ ಹುದ್ದೆ ಮತ್ತು ಸಂಖ್ಯೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.

1.	ಸಹಾಯಕ ರಿಜಿಸ್ಟ್ರಾರ್ ಮತ್ತು ಸಹಾಯಕ ಆಡಳಿತಾಧಿಕಾರಿಗಳು	08
2.	ಕೋರ್ಟ್ ಆಫೀಸರ್	01
3.	ಶಿರಸ್ತೇದಾರ್	04
4.	ಶೀಘ್ರ ಲಿಪಿಗಾರರು	16
5.	ಪ್ರಥಮ ದರ್ಜೆ ಸಹಾಯಕರು	09
6.	ಬೆರಳಚ್ಚುಗಾರರು	01
7.	ಗ್ರೂಪ್ 'ಡಿ' ನೌಕರರು	06
	ಒಟ್ಟು	**45**

ಇ) ಹಾಸನ ಜಿಲ್ಲಾ ವೇದಿಕೆಯ ಅಧ್ಯಕ್ಷರ ಸ್ಥಾನಕ್ಕೆ ಈಗಾಗಲೇ ಸೂಕ್ತರಾದ ನ್ಯಾಯಾಧೀಶರನ್ನು ಆಯ್ಕೆ ಸಮಿತಿಯು ಆಯ್ಕೆ ಮಾಡಿದ್ದು, ಸದರಿಯವರ ನೇಮಕಾತಿಗಾಗಿ ಸಧ್ಯದಲ್ಲಿಯೇ ಆದೇಶವನ್ನು ಹೊರಡಿಸಲಾಗುವುದು. ಮಿತವ್ಯಯ ಆದೇಶಗಳು ಜಾರಿಯಲ್ಲಿರುವುದರಿಂದ, ನೇರ ನೇಮಕಾತಿಗಳು ಆಗುತ್ತಿಲ್ಲ. ಎಲ್ಲಾ ಇಲಾಖೆಗಳಲ್ಲೂ ಖಾಲಿ ಹುದ್ದೆಗಳು ಇರುತ್ತವೆ. 23 ನ್ಯಾಯಾಲಯಗಳಲ್ಲಿ, 45 ಖಾಲಿ ಹುದ್ದೆಗಳಿರುವುದು ನಿರ್ವಹಣಾತೀತವಲ್ಲ.

ಈಗ ಹಾಲಿ ಖಾಲಿ ಇರುವ ಸಿಬ್ಬಂದಿಗಳ ಹುದ್ದೆಗಳನ್ನು ವಿವಿಧ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ನಿಯೋಜನೆ ಮೇಲೆ ನೇಮಿಸಿಕೊಂಡು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) 22 ಜಿಲ್ಲಾ ವೇದಿಕೆಗಳಲ್ಲಿ 6399 ಫಿರ್ಯಾದುಗಳು ಬಾಕಿ ಇದ್ದು, ಸರಾಸರಿ ಒಂದು ವೇದಿಕೆಗೆ 290 ಪ್ರಕರಣಗಳಾಗುತ್ತದೆ. ಇದೇನು ಅಂತಹ ಹೆಚ್ಚಿನ ಕಾರ್ಯ ಒತ್ತಡ ಅಲ್ಲ. ಅವಶ್ಯಕತೆ ಉದ್ಭವವಾದಾಗ, ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುತ್ತದೆ.

ಬೈಂದೂರು ಕ್ಷೇತ್ರದಲ್ಲಿ ನೀರಾವರಿ ವಿದ್ಯುದೀಕರಣ

4449 - ಶ್ರೀ ಕೆ. ಗೋಪಾಲ ಪೂಜಾರಿ (ಬೈಂದೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಂದೂರು ವಿಧಾನಸಭಾ ಕ್ಷೇತ್ರವಾದ್ಯಂತ ನೀರಾವರಿ ಹಾಗೂ ವಿದ್ಯುದೀಕರಣ ಆಗಿ 5 ವರ್ಷಗಳಿಂದ ಮೀಟರ್‌ಗಾಗಿ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ, ಬಂದಿದ್ದಲ್ಲಿ ಮೀಟರ್‌ಗಳನ್ನು ಕೂಡಲೇ ಒದಗಿಸಲಾಗುವುದೇ?

ಆ) ಉಪಕರಣಗಳಿಗೆ ವಿದ್ಯುದೀಕರಣಗೊಳಿಸಲು ಆದ್ಯತೆ ನೀಡಲಾಗುವುದೆ?